# ದುಡ್ಡು ದೊಡ್ಡದಪ್ಪ..!

## ಪ್ರಶ್ನೋತ್ತರ

**ಸಿ ಎಸ್ ಸುಧೀರ್,** ಸಿಇಒ- ಸಂಸ್ಥಾಪಕರು
ಇಂಡಿಯನ್ ಮನಿ.ಕಾಂ



**ಬ್ಯಾಂಕಿಂಗ್, ಹೂಡಿಕೆ, ಉಳಿತಾಯ, ಗಳಿಕೆ, ಸಾಲ, ವಿಮೆ ಹೀಗೆ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ನೀವೂ ಕಳುಹಿಸಬಹುದು.**

**ಪ್ರಶ್ನೆ ಕಳುಹಿಸಬೇಕಾದ ಇ– ಮೇಲ್ ವಿಳಾಸ sudheer@indianMoney.com**

### ಎಲ್ ಐ ಸಿ ಪಾಲಿಸಿ ಮೇಲೆ ಸಾಲ ಸಿಗುತ್ತಾ....?

**1.) ನನ್ನ ಹೆಸರು ಚಿಂತನ್. ಸಕಲೇಶಪುರ ಮೂಲದ ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ತುರ್ತು ಹಣಕಾಸಿನ ಅಗತ್ಯವಿದ್ದಾಗ ಎಲ್ಐಸಿ ಪಾಲಿಸಿ ಬಾಂಡ್ ಮೇಲೆ ಸಾಲ ಪಡೆಯಬಹುದು ಎಂದು ನನ್ನ ಸ್ನೇಹಿತ ತಿಳಿಸಿದ. ಎಲ್ಐಸಿ ಬಾಂಡ್ ಮೇಲೆ ಸಾಲ ಪಡೆಯುವುದು ಹೇಗೆ ? ಬಡ್ಡಿ ದರ ಎಷ್ಟು ತಿಳಿಸಿ.**

ಚಿಂತನ್ ಅವರೇ ಎಲ್ಐಸಿ ಬಾಂಡ್ ಗಳ ಮೇಲೆ ಸಾಲ ಪಡೆಯಬಹುದು ಎನ್ನುವ ವಿಚಾರ ಬಹುತೇಕರಿಗೆ ತಿಳಿದಿಲ್ಲ. ತುರ್ತಾಗಿ ಎದುರಾಗುವ ಹಣಕಾಸಿನ ಅಗತ್ಯಗಳಿಗೆ ಎಲ್ಐಸಿ ಬಾಂಡ್ ಗಳ ಮೇಲೆ ಸಾಲ ಪಡೆಯುವುದು ಸುಲಭ ಮತ್ತು ಸುರಕ್ಷಿತ ವಿಧಾನ ಎನ್ನಬಹುದು. ಅನೇಕ ಜೀವ ವಿಮಾ ಪಾಲಿಸಿಗಳಲ್ಲಿ ಸಾಲ ಒದಗಿಸುವ ಸೌಲಭ್ಯ ಕಲ್ಪಿಸಲಾಗಿದೆ. ಪಾಲಿಸಿ ಮಾಡಿಸಿ ಮೂರು ವರ್ಷಗಳ ಕಾಲ ಪ್ರೀಮಿಯಂ ಕಟ್ಟಿದ್ದರೆ ನಿಮಗೆ ಸಾಲದ ಸೌಲಭ್ಯ ಸಿಗುತ್ತದೆ. ಸಿಂಗಲ್ ಪ್ರೀಮಿಯಂ ಪಾಲಿಸಿಗಳಾಗಿದ್ದರೆ ನೀವು ಸಾಲ ಪಡೆದುಕೊಳ್ಳಲು ಮೂರು ವರ್ಷಗಳ ಕಾಲ ಕಾಯಬೇಕಿಲ್ಲ, ತಕ್ಷಣವೇ ನಿಮಗೆ ಸಾಲ ಸಿಗುತ್ತದೆ. ಆದರೆ ಒಂದೆರಡು ತಿಂಗಳ ಅವಧಿಗೆ ಈ ಸಾಲ ಸಿಗುವುದಿಲ್ಲ. ಕನಿಷ್ಠ ಆರು ತಿಂಗಳ ಅವಧಿಗೆ ಮಾತ್ರ ಈ ಸಾಲ ಸಿಗುತ್ತದೆ. ಪಾಲಿಸಿ ಸಾಲಗಳಿಗೆ ಪ್ರಸ್ತುತ ಶೇ.9 ರಿಂದ ಶೇ 10 ರಷ್ಟು ವಾರ್ಷಿಕ ಬಡ್ಡಿ ದರ ನಿಗದಿಪಡಿಸಲಾಗುತ್ತಿದೆ. ಪಾಲಿಸಿ ಸರೆಂಡರ್ ವ್ಯಾಲ್ಯೂನ ಶೇ. 70 ರಿಂದ ಶೇ. 90 ರಷ್ಟು ಸಾಲವನ್ನು ನೀಡಲಾಗುತ್ತದೆ. ಎಷ್ಟು ಸಾಲ ಸಿಗುತ್ತದೆ ಎಂಬುದು ನೀವು ಎಷ್ಟು ನಿಖರವಾಗಿ ಪ್ರೀಮಿಯಂ ಕಟ್ಟಿದ್ದೀರಿ ಎನ್ನುವ ಅಂಶವನ್ನು ಒಳಗೊಂಡು ನಿರ್ಧಾರಿತವಾಗುತ್ತದೆ. ಬಾಂಡ್ ಮೇಲೆ ಪಡೆದ ಸಾಲವನ್ನು ನಮ್ಮ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದ್ದಾಗ ಪಾವತಿಸಬಹುದು. ಇದಕ್ಕೆ ಕಾಲಮಿತಿ ಇಲ್ಲ. ಪಾಲಿಸಿಯ ಮೇಲಿನ ಸಾಲದ ಬಡ್ಡಿಯನ್ನು 6 ತಿಂಗಳಿಗೊಮ್ಮೆ ಪಾವತಿಸಬಹುದು.

**ಗಮನಿಸಬೇಕಾದ ಅಂಶಗಳು–**

- ಎಲ್ ಐ ಸಿ ಬಾಂಡ್ ಗಳ ಮೇಲೆ ಸಾಲ ಮಾಡಿದಾಗ ಸಾಧ್ಯವಾದಷ್ಟು ಅದನ್ನು ಮರುಪಾವತಿ ಮಾಡಲು ಮನಸ್ಸು ಮಾಡಿ. ಸಾಲ ಮತ್ತು ಬಡ್ಡಿಯನ್ನು ಮರು ಪಾವತಿ ಮಾಡಿದಾಗ ನಿಮಗೆ ಮೆಚ್ಯೂರಿಟಿ ಹಣ ಒಟ್ಟಿಗೆ ಕೈಸೇರುತ್ತದೆ.
- ಸಾಲ ಮಾಡಿದಾಗ 6 ತಿಂಗಳಿಗೆ ಒಮ್ಮೆ ಬಡ್ಡಿ ಪಾವತಿಸುವುದು ಉತ್ತಮ. ಇದರಿಂದ ಚಕ್ರಬಡ್ಡಿ ಬೆಳೆಯುವುದನ್ನು ತಪ್ಪಿಸಬಹುದು.
- ತುರ್ತು ಅಗತ್ಯಗಳಿಗೆ ಮಾತ್ರ ಈ ರೀತಿ ಬಾಂಡ್ ಮೇಲೆ ಸಾಲ ಪಡೆಯುವುದು ಉತ್ತಮ ನಿರ್ಧಾರವಾಗುತ್ತದೆ. ಪರ್ಸನಲ್ ಲೋನ್ ಬಡ್ಡಿದರ ಶೇ. 12 ರಿಂದ ಶೇ. 16 ರಷ್ಟಿದೆ. ಅದಕ್ಕೆ ಪರ್ಯಾಯವಾಗಿ ಶೇ. 9 ರಿಂದ ಶೇ. 10 ರ ಬಡ್ಡಿ ದರ ಇರುವ ಎಲ್ ಐಸಿ ಬಾಂಡ್ ಲೋನ್ ಪಡೆದುಕೊಳ್ಳಬಹುದು.

**2.) ನಾನು ಬಾಗಲಕೋಟೆಯ ನಿವಾಸಿ ಮಂಜುನಾಥ್ ಜೂಟಿ. ಮನೆ ನವೀಕರಣ (ರೆನೋವೇಷನ್) ಮಾಡಲು ಹಣವಿಲ್ಲ. ಪರ್ಸನಲ್ ಲೋನ್ ಪಡೆದು ಮನೆ ಕಟ್ಟುವ ಆಲೋಚನೆ ಮಾಡಿದ್ದೇನೆ. ಇದು ಸರಿಯಾದ ನಿರ್ಧಾರವೇ.**

ಮನೆ ನವೀಕರಣಕ್ಕೆ ಅಂತಲೇ ಹೋಮ್ ರೆನೋವೇಷನ್ ಲೋನ್ ಅಂತ ಕೊಡ್ತಾರೆ. ಇದು ಪರ್ಸನಲ್ ಲೋನ್ ನ ಒಂದು ಭಾಗವೇ ಆಗಿದೆ. ಈ ಹೋಮ್ ರೆನೋವೇಷನ್ ಅಡಿಯಲ್ಲಿ ಅರ್ಜಿ ಸಲ್ಲಿಸಿ ಸಾಲ ಪಡೆದರೆ ಬಡ್ಡಿ ದರ ಹೆಚ್ಚಿರುತ್ತದೆ. ಮನೆಯ ಪೇಂಟಿಂಗ್ ನಿಂದ ಹಿಡಿದು ಕಟ್ಟಡ ವಿಸ್ತರಣೆ ಮಾಡುವುದಕ್ಕೂ ಈ ಲೋನ್ ಅವಕಾಶ ಕಲ್ಪಿಸುತ್ತದೆ. ಕೆಲ ಬ್ಯಾಂಕ್ ಗಳು 20 ಲಕ್ಷದಿಂದ 30 ಲಕ್ಷದ ವರೆಗೂ ರೆನೋವೇಷನ್ ಲೋನ್ ನೀಡುತ್ತವೆ. ಬಡ್ಡಿ ದರ ಒಂದೊಂದು ಬ್ಯಾಂಕ್ ನಲ್ಲಿ ಒಂದೊಂದು ರೀತಿ ಇದ್ದು 8.5 ರಿಂದ 14 ಪರ್ಸೆಂಟ್ ವರೆಗೂ ಇದೆ. ನಿಮ್ಮ ಅಗತ್ಯಗಳು ಮತ್ತು ಬಡ್ಡಿದರವನ್ನು ಆಧರಿಸಿ ಸೂಕ್ತ ಬ್ಯಾಂಕ್ ಆಯ್ಕೆ ಮಾಡಿ ಹೋಮ್ ರೆನೋವೇಷನ್ ಲೋನ್ ಪಡೆಯುವುದು ಉತ್ತಮ ನಿರ್ಧಾರ.

**3.) ನನ್ನ ಹೆಸರು ಜಯರಾಂ. ತುಮಕೂರಿನಲ್ಲಿ ವಾಸವಿರುವ ನಾನು 75 ವರ್ಷದ ಕೇಂದ್ರ ಸರ್ಕಾರದ ನಿವೃತ್ತ ಉದ್ಯೋಗಿ. ಮಾಸಿಕವಾಗಿ ನನಗೆ 16 ಸಾವಿರ ಪಿಂಚಣಿ ಬರುತ್ತದೆ. ಅಂಚೆ ಕಛೇರಿ ಉಳಿತಾಯ, ಬ್ಯಾಂಕ್ ಎಫ್ ಡಿ ಹಾಗೂ ಮುಂತಾದ ಮೂಲಗಳಿಂದ ಬರುವ ಆದಾಯ 3 ಲಕ್ಷ. ನಾನು ಐಟಿ ರಿಟರ್ನ್ಸ್ ಸಲ್ಲಿಸುವ ಅಗತ್ಯವಿದೆಯೇ ತಿಳಿಸಿ. ಈ ವರ್ಷ ಹಿರಿಯ ನಾಗರಿಕರ ಆದಾಯ ತೆರಿಗೆ ಮಿತಿ ಎಷ್ಟಿದೆ ಮಾಹಿತಿ ನೀಡಿ.**

60 ರಿಂದ 80 ವರ್ಷಗಳ ವಯಸ್ಸಿನವರನ್ನು ಸರ್ಕಾರ ಹಿರಿಯ ನಾಗರಿಕರು ಎಂದು ಪರಿಗಣಿಸುತ್ತದೆ. 2018 ರ ಬಜೆಟ್ ಪ್ರಕಾರ ನಿಮಗೆ 3 ಲಕ್ಷಗಳ ವರೆಗಿನ ಆದಾಯಕ್ಕೆ ತೆರಿಗೆ ಅನ್ವಯಿಸುವುದಿಲ್ಲ. ಆದರೆ ನಿಮ್ಮ ಒಟ್ಟು ವಾರ್ಷಿಕ ಆದಾಯ 4 ಲಕ್ಷ 92 ಸಾವಿರ ಆಗುವುದರಿಂದ ನೀವು ಐಟಿ ರಿಟರ್ನ್ಸ್ ಸಲ್ಲಿಸುವ ಅಗತ್ಯವಿದೆ. ನಿಮ್ಮ ವಯಸ್ಸು 80 ವರ್ಷ ದಾಟಿದ ಮೇಲೆ 5 ಲಕ್ಷಗಳ ವರೆಗೆ ನಿಮಗೆ ಆದಾಯ ತೆರಿಗೆ ವಿನಾಯಿತಿ ಇರುತ್ತದೆ. ಪ್ರಸಕ್ತ ಸಾಲಿನ ತೆರಿಗೆ ಮಿತಿಗಳ ಬಗ್ಗೆ ಪ್ರತ್ಯೇಕವಾಗಿ ವಿವರಿಸಲಾಗಿದೆ. ಅದನ್ನು ಗಮನಿಸಿ.

**ಆದಾಯ ತೆರಿಗೆ ಮಿತಿ 2018–19**

| ಆದಾಯ | ಸಾಮಾನ್ಯ ನಾಗರಿಕರು | ಹಿರಿಯ ನಾಗರಿಕರು (60–80 ವರ್ಷದ ಒಳಗಿನವರು) | ಹಿರಿಯ ನಾಗರಿಕರು (80 ವರ್ಷ ಮೇಲ್ಪಟ್ಟವರು) |
|---|---|---|---|
| 2 ಲಕ್ಷ 50 ಸಾವಿರ ರೂ ವರೆಗೆ. | ತೆರಿಗೆ ಇಲ್ಲ | ತೆರಿಗೆ ಇಲ್ಲ | ತೆರಿಗೆ ಇಲ್ಲ |
| 2 ಲಕ್ಷ 50 ಸಾವಿರದಿಂದ 3ಲಕ್ಷ ರೂ.ವರೆಗೆ | ಶೇ.5 ರಷ್ಟು ತೆರಿಗೆ | ತೆರಿಗೆ ಇಲ್ಲ | ತೆರಿಗೆ ಇಲ್ಲ |
| 3 ಲಕ್ಷದಿಂದ 5 ಲಕ್ಷ ರೂ. ವರೆಗೆ | ಶೇ.5 ರಷ್ಟು ತೆರಿಗೆ | ಶೇ.5 ರಷ್ಟು ತೆರಿಗೆ | ತೆರಿಗೆ ಇಲ್ಲ |
| 5 ಲಕ್ಷದಿಂದ 10 ಲಕ್ಷ ರೂ. ವರೆಗೆ | ಶೇ.20 ರಷ್ಟು ತೆರಿಗೆ | ಶೇ.20 ರಷ್ಟು ತೆರಿಗೆ | ಶೇ.20 ರಷ್ಟು ತೆರಿಗೆ |
| 10 ಲಕ್ಷ ರೂ. ಮೇಲ್ಪಟ್ಟು ಆದಾಯ ಹೊಂದಿರುವವರಿಗೆ | ಶೇ.30 ರಷ್ಟು ತೆರಿಗೆ | ಶೇ.30 ರಷ್ಟು ತೆರಿಗೆ | ಶೇ.30 ರಷ್ಟು ತೆರಿಗೆ |

IndianMoney.com ™

ಉಚಿತ ಆರ್ಥಿಕ ಸಲಹೆಗಾಗಿ ಮಿಸ್ ಕಾಲ್ ಕೊಡಿ
022 6181 6111